# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ . ಸಿ. 606/2022

ಫಿರ್ಯಾದಿಃ **ಕರ್ನಾಟಕ ಸರ್ಕಾರ, ರೇಲ್ವೆ ಪ್ರೋಟೆಕ್ಷನ್ ಪೊರ್ಸ್ , ಕಾರವಾರ**

-ವಿರುದ್ಧ-

ಆರೋಪಿಃ **ಪರಶುರಾಮ್ ಪೊಕ್ಕ ಗೌಡ**

ನಾನು **ಶ್ರೀ ಧನುರಾಜ್. ಎಸ್.ಎಂ. ಬಿ.ಎ. ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕಾರವಾರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ದೋಷಾರೋಪಣೆ

ನ್ಯಾಯಾಲಯದ ವ್ಯಾಪ್ತಿಯ ರೇಲ್ವೇ ಪೋಲೀಸ ವ್ಯಾಪ್ತಿಯ ಕಾರವಾರದ ರೇಲ್ವೆ ಸ್ಟೇಷನ್ ಹತ್ತಿರ ಮಡಗೋನ್ ಅಂತ್ಯದಲ್ಲಿ ದಿಃ 19-07-2022 ರಂದು ಬೆಳಗ್ಗ 09-36 ರ ಸಮಯಕ್ಕೆ ಆರೋಪಿತನಾದ ನೀನು KA-30/S-6138 ವಾಹನದಲ್ಲಿ ವೇಗವಾಗಿ ಚಲಾಯಿಸಿಕೊಂಡು ಬಂದು ಮುಚ್ಚಿದ್ದ LC Gate-54 ನಲ್ಲಿ ಸ್ಥಾಪಿಸಲಾದ ವಿದ್ಯುತ್ ಚಾಲಿತ ಬೂಮ್‌ಗೆ ಡಿಕ್ಕಿ ಪಡಿಸಿ ಹಾನಿಯನ್ನುಂಟುಮಾಡಿ ಅಲ್ಲಿಂದ ಆರೋಪಿತನಾದ ನೀನು ತಪ್ಪಿಸಿಕೊಂಡು ಹೋಗಿದ್ದು ಈ ಮೂಲಕ ಕಲಂ. 160(2) ರೇಲ್ವೇ ಕಾಯಿದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದರಿ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆ: 1.  ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ದೋಷರೋಪಣೆ ತಿಳಿಯಿತೆ?

**ಉತ್ತರಃ**

ಪ್ರಶ್ನೆ: 2.  ನೀನು ಈ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **04-06-2023** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಪ್ರ.ಪ್ರ.ದ.ನ್ಯಾ ದಂ., ಕಾರವಾರ.**